**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 24/2015**

**ಚಾ.ಸಾ. : 34**

**ಫ್ರಾ.ಸಾ. : 30**

ಸಾಕ್ಷಿಯ ಹೆಸರು : ಸಾವಿತ್ರಿ ನಾಯಕ
ಗಂಡನ ಹೆಸರು : ಆನಂದು ನಾಯಕ
ವಯಸ್ಸು : 53 ವರ್ಷ
ಉದ್ಯೋಗ : ಮಹಿಳಾ ಪೊಲೀಸ್ ಉಪ ನಿರೀಕ್ಷಕರು, ಕುಮಟಾ ಪೊಲೀಸ್ ಠಾಣೆ
ವಾಸ : ಕುಮಟಾ.

**ದಿನಾಂಕಃ 17-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದ**

1. ನಾನು ಜುಲೈ 2013 ರಿಂದ ಜನೆವರಿ 2018 ರವರೆಗೆ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಉಪ ನಿರೀಕ್ಷಕಳಾಗಿ ಕರ್ತವ್ಯ ನಿರ್ಹಿಸಿರುತ್ತೇನೆ.

2. ದಿನಾಂಕಃ 11.02.2015 ರಂದು ನಾನು ಸಾಯಂಕಾಲ ಶರಹ ಗಸ್ತು ಕರ್ತವ್ಯದಲ್ಲಿ ಇದ್ದಾಗ ರಾತ್ರಿ 8.30 ಗಂಟೆ ಸುಮಾರಿಗೆ ನಮ್ಮ ಠಾಣಾ ಸಿಬ್ಬಂದಿ ಫ್ರಾಸಾ-18 ರವರು ನನಗೆ ದೂರವಾಣಿ ಕರೆ ಮಾಡಿ ಮೃತೆಯು ಸುಟ್ಟ ಗಾಯಗಳಿಂದ ಚಿಕಿತ್ಸೆಗೆ ಹೊನ್ನಾವರ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ ಎಂದು ಮಾಹಿತಿ ನೀಡಿದ ಮೇರೆಗೆ, ನಾನು ಹೊನ್ನಾವರ ಠಾಣೆಗೆ ಬಂದು, ಫ್ರಾಸಾ-17 ಇವರನ್ನು ಕರೆದುಕೊಂಡು ಹೊನ್ನಾವರ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಾನು ಅಲ್ಲಿಯ ವೈದ್ಯಾಧಿಕಾರಿಗಳಿಗೆ ಭೇಟಿಯಾಗಿ ಮೃತೆಯು ಎಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ ಎಂದು ಮಾಹಿತಿ ಕೇಳಿದ್ದು, ಅವರು ಮೃತೆಯು ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ ಎಂದು ಹೇಳಿದ ಮೇರೆಗೆ, ನಾವು ಅಲ್ಲಿಗೆ ಹೋಗಿ ಮೃತೆಯನ್ನು ಭೇಟಿಯಾಗಿರುತ್ತೇವೆ. ಆಕೆಯನ್ನು ವಿಚಾರಿಸಿದಾಗ ಅವಳು ತನ್ನ ಮದುವೆಯಾಗಿ 5 ವರ್ಷ ಆಗಿದೆ ಎಂದು ಹೇಳಿದ ಮೇರೆಗೆ, ಆಕೆಯ ಹೇಳಿಕೆಯನ್ನು ಪಡೆದು ನಮಗೆ ನೀಡುವಂತೆ

ಪ್ರಾಸಾ–28 ರವರಿಗೆ ಕೋರಿಕೆ ಪತ್ರವನ್ನು ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಈಗ ನಾನು ನೋಡುತ್ತಿರುವ ನಿಪಿ–25 ಸದರಿ ಕೋರಿಕೆ ಪತ್ರ ಆಗಿರುತ್ತದೆ. ನಂತರ ಪ್ರಾಸಾ–28 ಇವರು ಹೊನ್ನಾವರ ಸರಕಾರಿ ಆಸ್ಪತ್ರೆಗೆ ಬಂದಿರುತ್ತಾರೆ ಹಾಗೂ ಮೃತೆಯನ್ನು ವೈದ್ಯಾಧಿಕಾರಿಗಳಾದ ಪ್ರಾಸಾ–19 ಇವರ ಸಮಕ್ಷಮ ವಿಚಾರಿಸಿರುತ್ತಾರೆ ಹಾಗೂ ಅವರ ಉಕ್ತಲೇಖನದಂತೆ ನಮ್ಮ ಸಿಬ್ಬಂದಿ ಪ್ರಾಸಾ–17 ರವರು ಮೃತೆಯ ಮರಣಪೂರ್ವ ಹೇಳಿಕೆಯನ್ನು ಬರೆದಿರುತ್ತಾರೆ. ಸದರಿ ಮೃತೆಯ ಮರಣಪೂರ್ವ ಹೇಳಿಕೆ ನಾನು ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ನಿಪಿ–2 ಆಗಿದ್ದು, ನಿಪಿ–2 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ–2(ಎಫ್) ಎಂದು ಗುರುತಿಸಲಾಯಿತು. ನಿಪಿ–2 ರಂತೆ ಹೇಳಿಕೆ ನೀಡುವಾಗ ಮೃತೆ ಮಾತನಾಡುತ್ತಿದ್ದಾಳಾ ಎಂದರೆ ಸಾಕ್ಷಿ ಸ್ವಲ್ಪ ಮಾತನಾಡುತ್ತಿದ್ದಳು ಎನ್ನುತ್ತಾರೆ. ನಂತರ ಪ್ರಾಸಾ–19 ರವರು ಮೃತೆಗೆ ಹೆಚ್ಚಿನ ಚಿಕಿತ್ಸೆಯ ಅವಶ್ಯ ಇದೆ ಎಂದು ಹೇಳಿದರು ಹಾಗೂ ಹಾಜರಿದ್ದ ಪಿರ್ಯಾದಿದಾರರು ಸಹಾ ಆಕೆಗೆ ಹೆಚ್ಚಿನ ಚಿಕಿತ್ಸೆ ಅಗತ್ಯ ಇದೆ ಎಂದು ಹೇಳಿದ್ದರಿಂದ, ನಾವು ಆಕೆಯನ್ನು ಹುಬ್ಬಳ್ಳಿಯ ಕೆಎಮ್‌ಸಿ ಆಸ್ಪತ್ರೆಗೆ ತುರ್ತು ಚಿಕಿತ್ಸಾ ವಾಹನದಲ್ಲಿ ಕಳುಹಿಸಿ ಕೊಟ್ಟಿರುತ್ತೇವೆ. ಆಸ್ಪತ್ರೆಯಲ್ಲಿ ಹಾಜರಿದ್ದ ಪ್ರಾಸಾ–1 ರವರು ವೈದ್ಯರ ಸಮಕ್ಷಮ ನನಗೆ ನಿಪಿ–1 ರಂತೆ ಲಿಖಿತ ಪಿರ್ಯಾದನ್ನು ನೀಡಿದ್ದು, ನಾನು ಅದನ್ನು ಸ್ವೀಕರಿಸಿರುತ್ತೇನೆ. ನಿಪಿ–1 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಹಿಂಬರಹ ಮತ್ತು ಸಹಿಯನ್ನು ಒಟ್ಟಾಗಿ ನಿಪಿ–1(ಬಿ) ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಹಿಂದಿರುಗಿ ಠಾಣಾ ಗುನ್ನಾ ಸಂಖ್ಯೆ 30/2015 ನ್ನು ನೋಂದಾಯಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ಸಿಬ್ಬಂದಿಯ ಮೂಲಕ ರವಾನಿಸಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಪ್ರಾಸಾ–25 ರವರು ವಹಿಸಿಕೊಂಡಿರುತ್ತಾರೆ.

3. ದಿಃ 14.02.2015 ರಂದು ಪ್ರಾಸಾ–25 ರವರು ನನಗೆ ಹಾಗೂ ಎಚ್‌ಸಿ–1329 ನೇದವರಿಗೆ ಹುಬ್ಬಳ್ಳಿ ಕೆಎಮಸಿ ಆಸ್ಪತ್ರೆಗೆ ಹೋಗಿ ಮೃತೆಯ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡು ವರದಿ ನೀಡುವಂತೆ ನಿಪಿ–32 ರಂತೆ ಜ್ಞಾಪನ ನೀಡಿರುತ್ತಾರೆ. ನಿಪಿ–32 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ–32(ಬಿ) ಎಂದು ಗುರುತಿಸಲಾಯಿತು. ಜ್ಞಾಪನವನ್ನು ಪಡೆದುಕೊಂಡು ನಾನು ಅದೇ ದಿನ ಹೆಚಸಿ–1329 ರವರನ್ನು ಕರೆದುಕೊಂಡು

ಹುಬ್ಬಳ್ಳಿಯ ಕೆಎಮಸಿ ಆಸ್ಪತ್ರೆಗೆ ಭೇಟಿ ನೀಡಿರುತ್ತೇನೆ ಹಾಗೂ ಅಲ್ಲಿಯ ಆಡಳಿತ ವೈದ್ಯಾಧಿಕಾರಿಗಳಿಗೆ ಮೃತೆಯು ಹೇಳಿಕೆ ಕೊಡಲು ಸಮರ್ಥಳಿದ್ದಾಳೆಯೇ ಎಂಬುದರ ಬಗ್ಗೆ ಲಿಖಿತ ಅಭಿಪ್ರಾಯ ನೀಡುವಂತೆ ಕೋರಿಕೊಂಡಿರುತ್ತೇನೆ. ನಂತರ ನಾನು ಚಿಕಿತ್ಸೆ ಪಡೆಯುತ್ತಿದ್ದ ಮೃತಳನ್ನು ಭೇಟಿ ಮಾಡಿ ರಾತ್ರಿ 8.00 ಗಂಟೆಯಿಂದ 8.30 ಗಂಟೆಯವರೆಗೆ ಆಕೆಯನ್ನು ಕರ್ತವ್ಯದಲ್ಲಿದ್ದ ವೈದ್ಯರ ಸಮಕ್ಷಮ ವಿಚಾರಿಸಿರುತ್ತೇನೆ ಹಾಗೂ ಆಕೆಯ ಮರಣಪೂರ್ವ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನನ್ನ ಉಕ್ತಲೇಖನದಂತೆ ನನ್ನ ಜೊತೆ ಇದ್ದ ನಮ್ಮ ಠಾಣಾ ಸಿಬ್ಬಂದಿ ಹೆಚಸಿ 1329 ರವರು ಮೃತಳ ಮರಣಪೂರ್ವ ಹೇಳಿಕೆಯನ್ನು ಬರೆದಿರುತ್ತಾರೆ ಹಾಗೂ ಅದಕ್ಕೆ ಸ್ಥಳದಲ್ಲಿ ಹಾಜರಿದ್ದ ಮೃತಳ ತಂದೆ ಪ್ರಾಸಾ–11 ಹಾಗೂ ತಾಯಿ ಪ್ರಾಸಾ–16 ಹಾಗೂ ಮೃತಳ ಚಿಕ್ಕಮ್ಮ ಪ್ರಾಸಾ–26 ಇವರ ಸಹಿಗಳನ್ನು ಮತ್ತು ಹಾಜರಿದ್ದ ವೈದ್ಯಾಧಿಕಾರಿಗಳ ಸಹಿಯನ್ನು ಪಡೆದಿರುತ್ತೇನೆ. ಈಗ ನಾನು ನೋಡುತ್ತಿರುವ ನಿಪಿ–21 ಮೃತಳ ಮರಣ ಪೂರ್ವ ಹೇಳಿಕೆಯಾಗಿದ್ದು, ನಿಪಿ–21 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ–21(ಡಿ) ಎಂದು ಗುರುತಿಸಲಾಯಿತು. ನಿಪಿ–21 ನ್ನು ದಾಖಲಿಸುವ ಕಾಲಕ್ಕೆ ಮೃತೆಯ ಮಾನಸಿಕ ಸ್ಥಿತಿ ಉತ್ತಮವಾಗಿತ್ತು ಹಾಗೂ ಆಕೆ ಆ ಸಮಯ ಸರಿಯಾಗಿ ಮಾತನಾಡುತ್ತಿದ್ದಳು. ನಂತರ ನಾನು ಠಾಣೆಗೆ ಮರಳಿ ಬಂದು ತನಿಖಾಧಿಕಾರಿಗಳ ಸಮಕ್ಷಮ ನನ್ನ ಲಿಖಿತ ವರದಿಯನ್ನು ನೀಡಿರುತ್ತೇನೆ. ಲಿಖಿತ ವರದಿಯನ್ನು ಈಗಾಗಲೇ ನಿಪಿ–34 ಎಂದು ಗುರುತಿಸಲಾಗಿದ್ದು, ನಿಪಿ–34 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ–34(ಬಿ) ಎಂದು ಗುರುತಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನ ಹೇಳಿಕೆಯನ್ನು ತನಿಖಾಧಿಕಾರಿಗಳ ಮುಂದೆ ನೀಡಿರುತ್ತೇನೆ. ನಾನು ದಾಖಲಿಸಿದ ಪ್ರ.ವ.ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ–45 ಎಂದು ಗುರುತಿಸಲಾಯಿತು. ನಿಪಿ–45 ರಲ್ಲಿ ನನ್ನ ಅಂಕಿಯ ರುಜು ಇರುತ್ತದೆ.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಎಸ್. ಬಿ. ಎಸ್ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಪರಮೇಶ್ವರ ಪ್ರಸನ್ನ ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ